**OS 412/2017**

ಪಿಡಬ್ಲ್ಯೂ **-1**

ದಿನಾಂಕಃ **07-01-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಮಾನ್ಯ ಶ್ರೀ. ಎ.ಎಸ್ ವಕೀಲರಿಂದಃ</u>

ದಾವಾ ಸ್ವತ್ತು **13** ಮುಕ್ಕಾಲು ಗುಂಟೆ ಇರುತ್ತದೆ. ಅದು ನನ್ನ ಗಂಡನ ತಂದೆಯ ಹೆಸರಿನಲ್ಲಿ ಇರುತ್ತದೆ. ನನ್ನ ಗಂಡನ ತಂದೆಯ ಹೆಸರಿನಲ್ಲಿ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸಂಪೂರ್ಣವಾಗಿ ಖಾಲಿ ಜಮೀನು ಎಂದರೆ ಮನೆ ಇದೆ, ಎಂದರೆ ಮನೆ ಹಿಂದೆ ಮುಂದೆ ಖಾಲಿ ಜಾಗ ಇದೆ. ಮನೆ **2** ಗುಂಟೆ ಜಾಗದಲ್ಲಿ ಇರುತ್ತದೆ. ನಾವು ವಾಸವಿರುವ ಮನೆಗೆ ಪಂಚಾಯಿತಿಯಲ್ಲಿ ಅಸೆಸ್ ಮೆಂಟ್ ಆಗ ಬರೆದಿರುವುದಿಲ್ಲ, ಈಗಲೂ ಬರೆದಿರುವುದಿಲ್ಲ.

ಸದರಿ ಮನೆಯನ್ನು ನನ್ನ ಗಂಡನ ತಂದೆ ಕಟ್ಟಿರುತ್ತಾರೆ. ನಾವು ಇರುವ ಮನೆಗೆ ಕಂದಾಯ ವಗೈರೆ ಕಟ್ಟುತ್ತಿಲ್ಲ. ನಮ್ಮ ಮನೆಯ ಪೂರ್ವಕ್ಕೆ ನಮ್ಮದೇ ಜಾಗ ಇರುತ್ತದೆ, ಅದರ ವಿಸ್ತೀರ್ಣ ನನಗೆ ಗೊತ್ತಾಗುವುದಿಲ್ಲ **2** ಗುಂಟೆ ಇರಬಹುದು. ನಮ್ಮ ಮನೆಯ ಪೂರ್ವಕ್ಕೆ ಪ್ರತಿವಾದಿ ಮನೆ ಕಟ್ಟಿರುತ್ತಾರೆ. ನಮ್ಮ ಮನೆಯ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ನಮ್ಮ ಮನೆಯ ನೇರಕ್ಕೆ ರಸ್ತೆಯ ಪಕ್ಕ ಪ್ರತಿವಾದಿ ಕಟ್ಟಿರುವ ಮನೆ ಇರುತ್ತದೆ. ನಮ್ಮ ಮನೆಯ ಪೂರ್ವಕ್ಕೆ ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆ ಇದೆ ಎಂದರೆ ಸರಿಯಲ್ಲ. ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆ ನೋಡಿರುತ್ತೇನೆ. ನನ್ನ ಹಾಗೂ ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆ ರೋಡಿನ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆಯ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆಯ ವಿವರ ಗ್ರಾಮ ಪಂಚಾಯಿತಿಯಲ್ಲಿ ನಮೂದು ಆಗಿದೆ ಎಂದರೆ ಸರಿ. ಚಿಕ್ಕಪುಟ್ಟಶೆಟ್ಟಿಯ ರವರ ಮಗ ಪುಟ್ಟ ಚೆನ್ನ ಶೆಟ್ಟಿ ರವರ ಮನೆಯ ಬಾಗಿಲು ಮತ್ತು ಹನುಮನಶೆಟ್ಟಿಯ ಮನೆ ಬಾಗಿಲು ನೇರಕ್ಕೆ ಇರುತ್ತದೆ ಎಂದರೆ ಸರಿ . ಅದರ ಮಧ್ಯೆ ರಸ್ತೆ ಇರುತ್ತದೆ ಎಂದರೆ ಸರಿ.

**1** ನೇ ಪ್ರತಿವಾದಿ ಕಟ್ಟಿರುವ ಮನೆಯ ದಕ್ಷಿಣಕ್ಕೆ ರಾಮಶೆಟ್ಟಿಯ ರವರ ಮನೆ ಇದೆ ಎದರೆ ಸರಿಯಲ್ಲ. ನಮ್ಮ ಮನೆ ಇದೆ. ಸದರಿ ಮನೆ ಯಾರಿಗೆ ಸೇರಿದೆ ಮತ್ತು ಅದರ ವಿಸ್ತೀರ್ಣ ಎಷ್ಟು ಎಂದು ಪಂಚಾಯಿತಿ ದಾಖಲೆಯಲ್ಲಿ ನಮೂದು ಆಗಿದೆ ಎಂದರೆ ಗೊತ್ತಿಲ್ಲ. **1** ನೇ ಪ್ರತಿವಾದಿ ಕಟ್ಟಿರುವ ಮನೆಯ ದಕ್ಷಿಣಕ್ಕೆ ನಮ್ಮ ಮನೆ ಇದೆ ಅದರ ದಾಖಲೆಗಳು ಸಹ ಇರುತ್ತವೆ. ಪಂಚಾಯಿತಿಯಲ್ಲಿ ಸದರಿ ಮನೆಯ ಬಗ್ಗೆ ಬರೆದಿರುವುದಿಲ್ಲ. ರಾಮಶೆಟ್ಟಿ ರವರ ಮನೆಯ ನಂತರ ಚಿಕ್ಕಚೆನ್ನಶೆಟ್ಟಿಯ ರವರ ಮನೆ ಇದೆ ಎಂದರೆ ಸರಿ ಎಂದರೆ ಸರಿಯಲ್ಲ, ಖಾಲಿ ಜಾಗ ಇರುತ್ತದೆ.

ಚಿಕ್ಕಚೆನ್ನಶೆಟ್ಟಿಯ ಜಾಗದ ನಂತರ ಕೃಷ್ಣ ಬಿನ್ ಚಿಕ್ಕೋನು ರವರ ಖಾಲಿ ಜಾಗ ಎಂದರೆ ಸರಿ. ಕೃಷ್ಣ ಬಿನ್ ಚಿಕ್ಕೋನು ರವರ ಜಾಗದ ನಂತರ ಹುಲ್ಲಿನ ಮೆದೆ ಇದೆ ಎಂದರೆ ಸರಿಯಲ್ಲ. ಸದರಿ ಹುಲ್ಲಿನ ಮೆದೆಯು ಕೃಷ್ಣ ಬಿನ್ ಚಿಕ್ಕೋನು ರವರಿಗೆ ಸೇರಿರುತ್ತದೆ.

**1** ನೇ ಪ್ರತಿವಾದಿ ಮನೆಯ ಪಶ್ಚಿಮಕ್ಕೆ ಓಡಾಡಲೂ ರಸ್ತೆ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಾವು ಬಿಟ್ಟಿರುತ್ತೇವೆ. ಸದರಿ ರಸ್ತೆಯ ಪಕ್ಕಕ್ಕೆ ದೊಡ್ಡಪುಟ್ಟ ಶೆಟ್ಟಿ ರವರ ಮಗ ಚಿಕ್ಕಚೆನ್ನಶೆಟ್ಟಿ ರವರ ಮನೆ ಇರುತ್ತದೆ . ಚಿಕ್ಕಚೆನ್ನಶೆಟ್ಟಿ ರವರ ಮನೆ ದಕ್ಷಿಣಕ್ಕೆ ಚಿಕ್ಕರಾಮ ಶೆಟ್ಟಿ ರವರ ಮನೆ ಇದೆ ಎಂದರೆ ಸರಿ. ಚಿಕ್ಕರಾಮಶೆಟ್ಟಿ ರವರ ಮನೆ ಆದ ನಂತರ ಚಿಕ್ಕೋನು ರವರಿಗೆ ಸೇರಿದ ಹಿತ್ತಲು ಇದೆ ಎಂದರೆ ಸರಿ. ಹಿತ್ತಲ ನಂತರ ದಕ್ಷಿಣಕ್ಕೆ ಲಕ್ಷ್ಮಮ್ಮ ರವರ ವಾಸದ ಮನೆ ಇದೆ ಎಂದರೆ ಸರಿ. ಸದಗರಿ ಲಕ್ಷ್ಮಮ್ಮ, ಚಿಕ್ಕರಾಮಶೆಟ್ಟಿ **1** ನೇ ಪ್ರತಿವಾದಿ ಬಿಟ್ಟಿರುವ ದಾರಿಯಲ್ಲಿ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ, ನಾ ವೇ ಬಿಟ್ಟಿರುತ್ತೇವೆ.

ಚಿಕ್ಕಚೆನ್ನಶೆಟ್ಟಿ ನನ್ನ ಮೈದುನ ಇವರಿಗೆ ಸಂಬಂಧಪಟ್ಟ ಜಾಗದ ಬಗ್ಗೆ ಪಂಚಾಯಿತಿಯಲ್ಲಿ ನಮೂದು ಆಗಿದೆ ಎಂದರೆ ಸರಿ. ಚಿಕ್ಕರಾಮಶೆಟ್ಟಿ ರವರಿಗೆ ಸಂಬಂಧಪಟ್ಟ ಮನೆಯ ಬಗ್ಗೆ ಪಂಚಾಯಿತಿಯಲ್ಲಿ ನಮೂದು ಆಗಿದೆ ಎಂದರೆ ಸರಿ. ದಕ್ಷಿಣದ ದಿಕ್ಕಿನ ಮುದುವರೆ ಚಿಕಣ್ಣ ರವರ ಜಮೀನಿನ ವರೆಗೆ ರಸ್ತೆಯಿಂದ ಈಗ ಹೇಳಿದ ಮನೆ, ಹಿತ್ತಲು ಮತ್ತು ರಸ್ತೆ ಯು ಬರುತ್ತದೆ ಎಂದರೆ ಸರಿ.

ನಾನು ವಾದ ಪತ್ರದಲ್ಲಿ ಹೇಳಿದ ಹಾಗೇ **13** ವರೆ ಗುಂಟೆ ಸ್ವರೂಪದ ಜಮೀನು ಅಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. **13** ವರೆ ಗುಂಟೆ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ಯಾವ ವರ್ಷದಿಂದ ನೋಡುತ್ತಾ ಬಂದಿದ್ದೇನೆ ಎಂದು ಹೇಳಲು ಆಗುವುದಿಲ್ಲ.

ಹೊಸಗಾವಿ ಗ್ರಾಮದ ಗಾಣಿಗರ ಜಾತಿಯ ರಾಮಶೆಟ್ಟಿಯ ರವರ ಮಗ ಚೆನ್ನಶೆಟ್ಟಿ ಎಂದರೆ ಅವರು ಬೇರೆ ಊರಿನವರು. ರಾಮಶೆಟ್ಟಿಯ ರವರ ಮಗ ಚೆನ್ನಶೆಟ್ಟಿ ಯಾರು ಎಂದು ನನಗೆ ಗೊತ್ತಿಲ್ಲ. ರಾಮಶೆಟ್ಟಿ ಬಿನ್ ದೊಡ್ಡ ಪುಟ್ಟಶೆಟ್ಟಿ ಅಂದರೆ ಚಿಕ್ಕರಾಮಶೆಟ್ಟಿ. ರಾಮಶೆಟ್ಟಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ರಾಮಶೆಟ್ಟಿಯ ಮಗ ಚೆನ್ನಶೆಟ್ಟಿ ಎಂದರೆ ಸರಿಯಲ್ಲ.

**1** ನೇ ಪ್ರತಿವಾದಿ ಕಟ್ಟಿರುವ ಮನೆ ಪೂರ್ವಕ್ಕೆ ಮರಿಯನ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ದೊಡ್ಡ ಪುಟ್ಟಶೆಟ್ಟಿ ರವರ ಮನೆ ಎಂದರೆ ಸರಿ. ದೊಡ್ಡ ಪುಟ್ಟಶೆಟ್ಟಿ ರವರ ಜಮೀನಿನಲ್ಲಿ ಈಗ ಚಿಕ್ಕಚೆನ್ನ ಶೆಟ್ಟಿ ಇದ್ದಾರೆ ಎಂದರೆ ಸರಿ. **1** ನೇ ಪ್ರತಿವಾದಿ ಕಟ್ಟಿರುವ ಮನೆಯ ದಕ್ಷಿಣಕ್ಕೆ ರಾಮಶೆಟ್ಟಿಗ ಸೇರಿದ ಜಮೀನು ಎಂದರೆ

ಸರಿಯಲ್ಲ, ನಮ್ಮ ಜಮೀನು ಇದೆ. 1 ನೇ ಪ್ರತಿವಾದಿ ಮನೆಯ ಉತ್ತರಕ್ಕೆ ಗ್ರಾಮ ಠಾಣಾ ಜಾಗ ಇತ್ತು , ಅದು ಟಾರ್ ರಸ್ತೆ ಆಗಿದೆ ಎಂದರೆ ಸರಿ, ಮದ್ದೂರು ಕೊಪ್ಪ ಮುಖ್ಯ ರಸ್ತೆ.

**02-05-1970** ರಲ್ಲಿ **1** ನೇ ಪ್ರತಿವಾದಿ ಮನೆ ಕಟ್ಟಿರುವ ಜಾಗ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಅದು ನಮ್ಮ ಜಾಗ. ದಾವಾ ಸ್ವತ್ತು ನನ್ನ ಗಂಡ ಒಡಹುಟ್ಟಿದವರಿಗೂ ಸಹ ಭಾಗ ಆಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಗಂಡನ ಆಸ್ತಿ ಆಗಿರುವುದಿಲ್ಲ, ಅವರ ಸಹೋದರರಿಗೂ ಆಗಿರಬೇಕು ಎಂದರೆ ಸರಿಯಲ್ಲ, ವಿಭಾಗವಾದ ನಂತರ ನನ್ನ ಗಂಡನಿಗೆ ಬಂದಿರುತ್ತದೆ. ದಾವಾ ಸ್ವತ್ತು ನನ್ನ ಗಂಡನ ಹೆಸರಿನಲ್ಲಿ ಇಲ್ಲ, ನನ್ನ ಮಾವನ ಹೆಸರಿನಲ್ಲಿ ಇದೆ. ನನ್ನ ಮಾವ ನನ್ನ ಗಂಡನಿಗೆ ದಾವಾ ಸ್ವತ್ತು ನೀಡಿರುವ ಬಗ್ಗೆ ದಾಖಲೆ ಇಲ್ಲ. ಸಾಕ್ಷಿಯು ಮುಂದುವರೆದು ಕ್ರಯ ಪತ್ರ ಇದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಾಯಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ